# ಮುರಳಿ ಪಾನಿಪುರಿ

ತಮ್ಮ ‘ಒಗ್ಗರಣೆ ಡಬ್ಬಿ’ ಅಡುಗೆ ಶೋನೊಂದಿಗೆ ಮುರಳಿ ಕನ್ನಡ ಕಿರುತೆರೆ ವೀಕ್ಷಕರಿಗೆ ಚಿರಪರಿಚಿತರಾಗಿದ್ದಾರೆ. ಈ ಮಧ್ಯೆ ಮನರಂಜನಾ ವಾಹಿನಿಯೊಂದರಲ್ಲಿ ‘ಪಾನಿಪುರಿ ವಿತ್ ಮುರಳಿ’ ಶೋ ನೊಂದಿಗೆ ಬೇರೆಯದ್ದೇ ಕಾನ್ಸೆಪ್ಟ್‌ನೊಂದಿಗೆ ಕ್ಯಾಮರಾ ಎದುರು ನಿಂತಿರುವುದು ವಿಶೇಷ.

ಕಾರ್ಯಕ್ರಮದಲ್ಲಿ ಮುರಳಿ ಕಿರುತೆರೆ ಮತ್ತು ಹಿರಿತೆರೆಯ ಖ್ಯಾತನಾಮರೊಂದಿಗೆ ಹರಟೆ ಹೊಡೆಯಲಿದ್ದಾರೆ. ಲಘು ಹರಟೆಯೊಂದಿಗೆ ಖ್ಯಾತನಾಮರ ಸಾಧನೆ-ಬದುಕಿನ ಮೇಲೆ ಬೆಳಕು ಚೆಲ್ಲುವ ಪ್ರಯತ್ನವಿದು. ನೇರಪ್ರಸಾರದ ಈ ಕಾರ್ಯಕ್ರಮದಲ್ಲಿ ವೀಕ್ಷಕರು ಫೋನ್ ಕರೆ ಮಾಡಿ ನಿರೂಪಕರು ಹಾಗೂ ಅತಿಥಿಗಳೊಂದಿಗೆ ಮಾತನಾಡಬಹುದು. ‘ಮಾಧ್ಯಮ ಎಂದ ತಕ್ಷಣ ಎಲ್ಲರೂ ಯೋಚಿಸೋದು ಹೊಸತನ...ಹೊಸ ಯೋಚನೆ ಹಾಗೂ ಭಿನ್ನ ಮನರಂಜನೆ. ಇಂತಹ ಮನರಂಜನೆ ಕಾರ್ಯಕ್ರಮಗಳನ್ನು ವೀಕ್ಷಕರಿಗೆ ನೀಡುವುದು ನಮ್ಮ ಮುಖ್ಯ ಗುರಿಯಾಗಿದೆ. ಕುಟುಂಬ ಸಮೇತರಾಗಿ ನೋಡುವಂತಹ ಅದ್ದೂರಿತನದ ರಿಯಾಲಿಟಿ ಶೋಗಳು, ಮನ ಮಿಡಿಯುವ ಧಾರವಾಹಿಗಳು ನಿಮ್ಮ ಮನೆಗೆ ಬರಲಿವೆ’ ಎಂದು ವಾಹಿನಿ ಮೂಲಗಳು ಹೇಳುತ್ತವೆ.

